080 – 22870060 / 22873151 Extn: 203
Fax: 080-22875798
email: dmekarnataka@yahoo.com

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

# DIRECTORATE OF MEDICAL EDUCATION

ಆನಂದರಾವ್ ವೃತ್ತ, ಬೆಂಗಳೂರು- 560 009
Ananda Rao Circle, BANGALORE-560 009

ಸಂಖ್ಯೆ: ಎಂಇ/ಎಂಎಸ್ಆರ್/ಪಿಜಿಐಎನ್ಎಸ್/ಸುತ್ತೋಲೆ/01/2018–19

ದಿನಾಂಕ: 31 /10/2018

## ಸುತ್ತೋಲೆ

**ವಿಷಯ:–** 2018–19ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸೇವಾನಿರತ ಸ್ನಾತಕೋತ್ತರ ವೈದ್ಯಾಧಿಕಾರಿಗಳಿಗೆ ಬೋಧನಾ ಶುಲ್ಕ ಮರುಪಾವತಿಸಲು ಅರ್ಜಿ ಆಹ್ವಾನಿಸುವ ಬಗ್ಗೆ.

**ಉಲ್ಲೇಖ :–** ಸರ್ಕಾರದ ಆದೇಶ ಸಂಖ್ಯೆ: ಆಕುಕ 222 ಹೆಚ್ಎಸ್ಹೆಚ್ 2018, ದಿನಾಂಕ: 07-05–2018

2 ಸರ್ಕಾರದ ಆದೇಶ ಸಂಖ್ಯೆ: ಆಕುಕ 112 ಆರ್‌ಜಿಯು 2018, ದಿನಾಂಕ: 23–04–2018.

******

ಉಲ್ಲೇಖಿತ ಸರ್ಕಾರಿ ಆದೇಶಗಳಂತೆ ರಾಜ್ಯದ ಖಾಸಗಿ ವೈದ್ಯಕೀಯ / ದಂತ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳಿಗೆ ಸ್ನಾತಕೋತ್ತರ ವೈದ್ಯಕೀಯ / ದಂತ ವಿಜ್ಞಾನ ಡಿಗ್ರಿ / ಡಿಪ್ಲೊಮಾ ವ್ಯಾಸಂಗಕ್ಕೆ ಪಿಜಿಇಟಿ ನೀಟ್ ಮೂಲಕ 2018–19 ರಲ್ಲಿ ಆಯ್ಕೆಯಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿಯೋಜನೆಗೊಂಡು ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಆ.ಕು.ಕ ಇಲಾಖೆಯ ಸೇವಾನಿರತ ವೈದ್ಯಾಧಿಕಾರಿಗಳಿಗೆ ಸರ್ಕಾರ ನಿಗಧಿ ಪಡಿಸಿದ ದರದಲ್ಲಿ ಬೋಧನಾ ಶುಲ್ಕ ಮರುಪಾವತಿ ಸಂಬಂಧ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅರ್ಜಿ ನಮೂನೆಯನ್ನು ಈ ನಿರ್ದೇಶನಾಲಯದ ವೆಬ್‌ಸೈಟ್ ವಿಳಾಸ: www.karnataka.gov.in/dmekarnataka ರಲ್ಲಿ ಡೌನ್‌ಲೋಡ್ ಮಾಡಿಕೊಂಡು ಈ ಕೆಳಕಂಡ ದೃಢೀಕೃತ ದಾಖಲೆಗಳನ್ನು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಪ್ರಾಂಶುಪಾಲರ ಸೂಕ್ತ ಶಿಫಾರಸ್ಸಿನೊಂದಿಗೆ ಹಾಗೂ ತಮ್ಮ ವೇತನ ಸೆಳೆಯುವ ಜಿಲ್ಲಾ ಶಸ್ತ್ರಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು ಅಥವಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಮೂಲಕ ಈ ನಿರ್ದೇಶನಾಲಯಕ್ಕೆ ದಿನಾಂಕ: 15/02/2019 ರ ಒಳಗೆ ಕಳುಹಿಸಿ ಕೊಡಲು ತಿಳಿಸಲಾಗಿದೆ.

**ಸಲ್ಲಿಸಬೇಕಾದ ದಾಖಲೆಗಳು:–**

1. ನಿಗಧಿತ ಅರ್ಜಿನಮೂನೆ
2. ಸ್ನಾತಕೋತ್ತರ ವೈದ್ಯಕೀಯ / ದಂತ ವ್ಯಾಸಂಗಕ್ಕೆ ಆಯ್ಕೆಯಾದ ಬಗ್ಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆ.ಇ.ಎ) ರವರು ನೀಡಿದ ಸೀಟು ಹಂಚಿಕೆ ಪತ್ರದ ದೃಢೀಕೃತ ನಕಲು ಪ್ರತಿ.
3. ಕೆ.ಇ.ಎ ನಲ್ಲಿ 2018–19ನೇ ಬೋಧನಾ ಶುಲ್ಕ ಪಾವತಿಸಿದ ರಸೀದಿಯ ದೃಢೀಕೃತ ನಕಲು ಪ್ರತಿ.
4. ಸ್ನಾತಕೋತ್ತರ ವೈದ್ಯಕೀಯ /ದಂತ ವಿಜ್ಞಾನ ಕೋರ್ಸಿಗೆ ನಿಯೋಜನೆಗೊಂಡ ಸರ್ಕಾರಿ ಆದೇಶದ ಪ್ರತಿ ಹಾಗೂ ಪ್ರತಿನಿಯೋಜನಾ ಸೌಲಭ್ಯದ ಮಂಜೂರಾತಿ ಆದೇಶ ಪ್ರತಿ.
5. ಪದಮುಕ್ತಗೊಂಡ ಹಾಗೂ ವರದಿ ಮಾಡಿಕೊಂಡ ಬಗ್ಗೆ ಸಿಟಿಸಿಗಳ ದೃಢೀಕೃತ ಪತ್ರ.

ನಿರ್ದೇಶಕರು, ವೈದ್ಯಕೀಯ ಶಿಕ್ಷಣ

ಪ್ರತಿಯನ್ನು:–

1. ಡೀನ್ / ಪ್ರಾಂಶುಪಾಲರು, ರಾಜ್ಯದ ಎಲ್ಲಾ ಖಾಸಗಿ ವೈದ್ಯಕೀಯ/ದಂತ ಕಾಲೇಜು ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಜಿಲ್ಲಾ ಶಸ್ತ್ರಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು, / 2 ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಕರ್ನಾಟಕ ಇವರಿಗೆ ಅನುಸರಣಾ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

**ಸೇವಾನಿರತ ಸ್ನಾತಕೋತ್ತರ ವೈದ್ಯಕೀಯ / ದಂತ ವೈದ್ಯಕೀಯ ಅಭ್ಯರ್ಥಿಗಳಿಂದ ಶುಲ್ಕ ಮಂಜೂರಾತಿಗೆ ಅರ್ಜಿ**
**(ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ)**

| | | |
|---|---|---|
| 01 | ವೈದ್ಯರ ಪೂರ್ಣ ಹೆಸರು | |
| 02 | ವೈದ್ಯರ ತಂದೆಯ ಹೆಸರು ಮತ್ತು ವಿಳಾಸ | |
| 03 | ವೈದ್ಯರ ಜನ್ಮ ದಿನಾಂಕ ಮತ್ತು ಹುಟ್ಟಿದ ಸ್ಥಳ | |
| 04 | ವೈದ್ಯರು ವ್ಯಾಸಂಗ ಮಾಡುತ್ತಿರುವ ಮಹಾವಿದ್ಯಾಲಯದ ಹೆಸರು ಮತ್ತು ವಿಳಾಸ | |
| 05 | ವೈದ್ಯಕೀಯ ಕಾಲೇಜಿಗೆ ಸೇರಿದ ವರ್ಷ, ವ್ಯಾಸಂಗ ಮಾಡುತ್ತಿರುವ ತರಗತಿ ಮತ್ತು ವಿಷಯ (ಸೀಟು ಹಂಚಿಕೆಯ ಪತ್ರದ ದೃಢೀಕೃತ ನಕಲು ಪ್ರತಿ ಲಗತ್ತಿಸುವುದು) | |
| 06 | ಪ್ರಥಮ ವರ್ಷಕ್ಕೆ ಕಾಲೇಜಿನಲ್ಲಿ ಬೋಧನಾ ಶುಲ್ಕ ಪಾವತಿಸಿದ ರಸೀದಿಯ ದೃಢೀಕೃತ ನಕಲು ಪ್ರತಿ ಲಗತ್ತಿಸುವುದು | |
| 07 | ನಿಯೋಜನಾ ಆದೇಶದ ಪ್ರತಿ ಹಾಗೂ ಪದಮುಕ್ತಗೊಂಡ ಮತ್ತು ಪದಗ್ರಾಹಿ ಸಿ.ಟಿ.ಸಿ. | |
| 08 | ಪ್ರತಿನಿಯೋಜನಾ ಸೌಲಭ್ಯದ ಆದೇಶದ ಪ್ರತಿ ಅಥವಾ ಮಹಾಲೇಖಪಾಲರ ವೇತನ ಚೀಟಿ | |
| 09 | ನಿಯೋಜನೆ ಪ್ರಥಮವೇ? | |
| 10 | ಈ ವರ್ಷ ಮರುಪಾವತಿ ಮಾಡಬೇಕಾದ ಶುಲ್ಕದ ಮೊತ್ತ ಎಷ್ಟು? | |
| 11 | ಇತರೆ ಮಾಹಿತಿ | ದೀರ್ಘಾವದಿ ರಜೆಯ ವಿವರ:<br>ಅನಧಿಕೃತ ಗೈರು ಹಾಜರಿ ವಿವರ:<br>ವೈದ್ಯಕೀಯ ರಜೆ ವಿವರ: |

## ಘೋಷಣೆ

ಶ್ರೀ / ಶ್ರೀಮತಿ -----------------------------------------ಆದ ನಾನು 2018–19ನೇ ಸಾಲಿನಲ್ಲಿ --------------------------------ಕಾಲೇಜಿನಲ್ಲಿ ಪ್ರಥಮ ವರ್ಷದಲ್ಲಿ ಎಂಡಿ/ಎಂಎಸ್/ಡಿಪ್ಲೊಮಾ/ಎಂಡಿಎಸ್ ವ್ಯಾಸಂಗ ಮಾಡುತ್ತಿದ್ದು, ನಾನು ಸದರಿ ಕಾಲೇಜಿನಲ್ಲಿ ಅಧಿಕೃತ ವಿದ್ಯಾರ್ಥಿಯಾಗಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪ್ರಥಮ ಬಾರಿಗೆ ಉನ್ನತ ವ್ಯಾಸಂಗಕ್ಕೆ ನಿಯೋಜನೆಗೊಂಡಿರುತ್ತೇನೆ. ಕಾಲೇಜಿಗೆ ಪ್ರವೇಶ ಪಡೆದ ದಿನದಿಂದಲೂ ಅನಧಿಕೃತ ಗೈರು ಹಾಜರಾಗಿರುವುದಿಲ್ಲವೆಂದು ಹಾಗೂ ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಯು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ. ಏನಾದರೂ ಸುಳ್ಳು / ತಪ್ಪು ಮಾಹಿತಿ ಕಂಡು ಬಂದಲ್ಲಿ ನನ್ನ ವಿರುದ್ದ ನಿಯಮಾನುಸಾರ ಕ್ರಮ ಜರುಗಿಸಬಹುದಾಗಿದೆ.

ದಿನಾಂಕ: ಸೇವಾನಿರತ ಸ್ನಾತಕೋತ್ತರ ವಿದ್ಯಾರ್ಥಿ(ನಿ)ಯ ಸಹಿ.

## Pre-Reciept

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ಪ್ರಥಮ ವರ್ಷದ ಬೋಧನಾ ಶುಲ್ಕ ರೂ.---------- /- ಗಳನ್ನು 2018–19 ನೇ ಆರ್ಥಿಕ ವರ್ಷದಲ್ಲಿ ಪಡೆದಿರುತ್ತೇನೆ.

ದಿನಾಂಕ: ಸೇವಾನಿರತ ಸ್ನಾತಕೋತ್ತರ ವಿದ್ಯಾರ್ಥಿ(ನಿ)ಯ ಸಹಿ.

## ವಿದ್ಯಾಸಂಸ್ಥೆಯ ದೃಢೀಕೃತ ಪತ್ರ

ಶ್ರೀ / ಶ್ರೀಮತಿ ----------------------------------------------------ರವರು ಈ ಸಂಸ್ಥೆಯ ಅಧಿಕೃತ ವಿದ್ಯಾರ್ಥಿ(ನಿ)ಯಾಗಿರುತ್ತಾರೆ. 2018–19ನೇ ಸಾಲಿನಲ್ಲಿ ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದು, ಇವರ ಅರ್ಜಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಸದರಿ ವಿದ್ಯಾರ್ಥಿ(ನಿ)ಯು ಈ ಹಿಂದೆ ಇದೇ ತರಗತಿಗೆ ಶುಲ್ಕ ಮರುಪಾವತಿ ಕೋರಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಇವರ ಹಾಜರಾತಿ ಮತ್ತು ಗುಣನಡತೆಯು ತೃಪ್ತಿಕರವಾಗಿದ್ದು, ಹಾಲಿ ವರ್ಷದಲ್ಲಿ ದೀರ್ಘಕಾಲ ಗೈರು ಹಾಜರಿ ಆಗಿರುವುದಿಲ್ಲ ಹಾಗೂ ಪ್ರಥಮ ವರ್ಷಕ್ಕೆ ಬೋಧನಾ ಶುಲ್ಕ ಪಾವತಿಸಿರುವುದರಿಂದ ಸದರಿಯವರಿಗೆ ಬೋಧನಾ ಶುಲ್ಕವನ್ನು ಮಂಜೂರು ಮಾಡಲು ಯಾವುದೇ ಅಭ್ಯಂತರವಿಲ್ಲವೆಂದು ದೃಢೀಕರಿಸಲಾಗಿದೆ.

ದಿನಾಂಕ: ಪ್ರಾಂಶುಪಾಲರ ಸಹಿ ಮತ್ತು ಮೊಹರು.